# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಪಿಡಬ್ಲ್ಯೂ: 22
ಸಿಡಬ್ಲ್ಯೂ: 12

**<u>ದಿನಾಂಕ: 30-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | : ಮಮತಾ |
| ಗಂಡನ ಹೆಸರು | : ಶಿವಕುಮಾರ್ |
| ವಯಸ್ಸು | : 54 ವರ್ಷ |
| ಉದ್ಯೋಗ | : ಗೃಹಿಣಿ |
| ವಾಸ ಸ್ಥಳ | : ಕೋಣನೂರು |

**<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:</u>**

ಈಗ **2–3** ವರ್ಷದ ಹಿಂದೆ ಕೋಣನೂರಿನ ಸುಮಾ ಇವರ ಮನೆಗೆ ಪೊಲೀಸರು ಕರೆಸಿದ್ದರು. ಅಲ್ಲಿಗೆ ನಾನು ಹೋಗಿದ್ದೆ. ಅಲ್ಲಿ ಸುಮಾ ಇವರ ಶವ ಇತ್ತು. ಆ ಶವಕ್ಕೆ ಬೆಡ್‌ಶೀಟ್ ಸುತ್ತಲಾಗಿತ್ತು. ಆ ಬಗ್ಗೆ ಪೊಲೀಸರು ಮಹಜರ್ ಕ್ರಮ ಜರುಗಿಸಿದರು ಮತ್ತು ಆ ಶವವನ್ನು ನನಗೆ ತೋರಿಸಿದರು. ಈಗ ನನಗೆ ತೋರಿಸಲಾದ ನಿಪಿ–**26** ರ ಮೇಲೆ ನನ್ನ ಸಹಿ ಇದ್ದು ಅದನ್ನು ನಿಪಿ–**26**(ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಶ್ರೀಮತಿ ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿ:</u>**

**2.** ಪೊಲೀಸರು ಮಹಜರ್ ಮಾಡಲು ಬಂದಿದ್ದರು ಎನ್ನುವುದು ಗೊತ್ತು. ಆದರೆ ಆ ನಿಪಿ–**26** ರಲ್ಲಿ ಏನೆಲ್ಲಾ ಬರೆದಿದ್ದಾರೆಂದು ಗೊತ್ತಿಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.